

# ಕೋಳಿ ಕುರಿಗಳಂತೆ ಮೃಗರಾಜನ ಬಲಿ

## ದಕ್ಷಿಣ ಆಫ್ರಿಕಾದಲ್ಲಿ ಬೇಟೆಯ ಮೋಜಿಗಾಗಿ ಸಿಂಹಗಳ ಸಾಕಣೆ

**ಬೇಟೆಯ ಮೋಜಿಗಾಗಿ ಬರುವ ಪ್ರವಾಸಿಗರಿಗೆ ಸಾಕುಸಿಂಹಗಳನ್ನು ಪೂರೈಸುವ ದಂಧೆಯೊಂದು ದಕ್ಷಿಣ ಆಫ್ರಿಕಾದಲ್ಲಿ ರೂಪುಗೊಂಡಿದೆ. ಸಿಂಹದ ಮೂಳೆಗಳಿಗೆ ಇರುವ ಅಪಾರ ಬೇಡಿಕೆ ಕೂಡ ಅವುಗಳ ಮೇಲೆ ಖದೀಮರ ಕಣ್ಣುಬೀಳಲು ಕಾರಣವಾಗಿದೆ.**

**■ ಡಾ. ಪ್ರೇಮಲತ ಬಿ.**

ಸಿಂಹದಂತಹ ಕ್ರೂರ ಮೃಗಗಳು ಸತ್ತಾಗ ಅವುಗಳ ಚರ್ಮ, ಉಗುರು, ಮೂಳೆ ಇತ್ಯಾದಿಗಳು ಮಾರುಕಟ್ಟೆ ಸರಕಾಗುವುದನ್ನು ಕೇಳಿರಬಹುದು. ಚಿರತೆ, ಹುಲಿ, ಆನೆಯಂತಹ ಕಾಡುಪ್ರಾಣಿಗಳನ್ನು ಅವುಗಳ ದೇಹದ ಅಂಗಾಂಗಗಳಿಗಾಗಿ ಅನಧಿಕೃತವಾಗಿ, ಕಳ್ಳತನದಲ್ಲಿ ಕದ್ದು ಬೇಟೆಯಾಡುವುದು ಕೂಡ ನಮಗೆಲ್ಲ ತಿಳಿದಿರುವ ವಿಷಾದದ ಸಂಗತಿ. ಆದರೆ, ಕ್ರೂರ ಕಾಡು ಮೃಗಗಳನ್ನು ಅವುಗಳ ಚರ್ಮ ಮತ್ತು ಮೂಳೆಗಳಿಗಾಗಿ, ಬೇಟೆಯ ಮಿಕಗಳನ್ನಾಗಿಸಲು, ಕ್ರೂರ ವಿನೋದಕ್ಕಾಗಿ ಆಟದ ಸಾಮಾನಿನಂತೆ ಬಳಸಲು, ಅವುಗಳ ತಲೆಗಳನ್ನು ಪಾರಿತೋಷಕಗಳನ್ನಾಗಿಸಲು ಸಹಸ್ರಾರು ಸಂಖ್ಯೆಯಲ್ಲಿ ಯಾವುದೇ ಕರುಣೆಯಿಲ್ಲದೆ ಸಾಕಾಣಿಕೆ ಮಾಡುವುದನ್ನು ಕೇಳಿದ್ದೀರಾ?

ಇದು ಮನುಷ್ಯತ್ವದ ದುರ್ಗತಿಯಾದರೂ ಖಂಡಿತವಾಗಿ ನಿಜ. ಅದರಲ್ಲೂ ಕಾಡಿನ ರಾಜ ಸಿಂಹಕ್ಕೆ ಈ ಬಗೆಯ ದುರ್ಗತಿ ದೊರಕಿರುವುದು ಮನುಷ್ಯನ ನೈತಿಕ ಅಧಃಪತನದ ದರ್ಶನವನ್ನು ಮಾಡಿಸುತ್ತಿದೆ. ಅಳಿದುಹೋಗುತ್ತಿರುವ ಕ್ರೂರ ಕಾಡುಪಾಣಿಗಳ ಪಟ್ಟಿಯಲ್ಲಿರುವ ಅಗ್ರಜ – ಕಾಡಿನರಾಜ ಸಿಂಹಕ್ಕೆ ಈ ಗತಿ ದೊರಕಿರುವ ಬಗ್ಗೆ ಹೊರಬಿದ್ದಿರುವ ಮಾಹಿತಿಗಳು ವನ್ಯಜೀವಿ ಪ್ರಿಯರನ್ನು ಬೆಚ್ಚಿಬೀಳಿಸಿವೆ.

ಇಂಗ್ಲೆಂಡಿನ ಪ್ರಾಣಿಪ್ರೇಮಿ, ಮಿಲಿಯನೇರ್ ಉದ್ಯಮಿ ಮತ್ತು ಮಾಜಿ ರಾಜಕೀಯ ಸದಸ್ಯ ಲಾರ್ಡ್ ಆಶ್ ಕ್ರಾಫ್ಟ್ ಈ ಬಗ್ಗೆ ಕೂಲಂಕಷ ತನಿಖೆ ಮತ್ತು ಅಧ್ಯಯನ ನಡೆಸಿ ಹೃದಯ ವಿದ್ರಾವಕ ಸತ್ಯಗಳನ್ನು ಹೊರಹಾಕಿದ್ದಾರೆ. ದಕ್ಷಿಣ ಆಫ್ರಿಕಾ ಒಂದರಲ್ಲೇ ಸುಮಾರು 12000 ಸಿಂಹಗಳನ್ನು ಬಂಧನದಲ್ಲಿಟ್ಟು ದನಗಳಿಗಿಂತ ಕೆಟ್ಟ ಸ್ಥಿತಿಯಲ್ಲಿ ತುಂಬಿದ್ದು, ಅಲ್ಲಿಯೇ ಅವುಗಳಿಗೆ ಅರೆಬರೆ ಊಟಹಾಕಿ ಕೆಟ್ಟ ವಾತಾವರಣದಲ್ಲಿ ಸಾಕುತ್ತಿರುವ ಬಗ್ಗೆ ಮನಕಲಕುವ ವಾಸ್ತವ ವಿಚಾರಗಳನ್ನು ಆಶ್ ಕ್ರಾಫ್ಟ್ ಬಯಲುಮಾಡಿದ್ದಾನೆ.

ಆಶ್ಚರ್ಯವಾದರೂ ಇದು ನಿಜ. ದಕ್ಷಿಣ ಆಫ್ರಿಕಾದಲ್ಲಿ ನೈಸರ್ಗಿಕ ವಾತಾವರಣದಲ್ಲಿ ಬದುಕಿರುವ ಸಿಂಹಗಳ ಸಂಖ್ಯೆ ಇದರಲ್ಲಿ ಕಾಲು ಭಾಗವೂ ಇಲ್ಲದಿರುವಾಗ ಸುಮಾರು ಇನ್ನೂರಕ್ಕೂ ಹೆಚ್ಚು ಕೇಂದ್ರಗಳಲ್ಲಿ ಖಾಸಗಿಯಾಗಿ 12 ಸಾವಿರ ಸಿಂಹಗಳನ್ನು ಸಾಕಲಾಗಿದೆಯಂತೆ. ಅವು ಬೆಳೆದು ವಯಸ್ಸಿಗೆ ಬಂದ ನಂತರ ಅವುಗಳನ್ನು ಕೋಳಿ – ಕುರಿಗಳಂತೆ ಕೊಲ್ಲಲಾಗುತ್ತದೆ.

### ವಿಶ್ವವ್ಯಾಪಿ ಮಾರುಕಟ್ಟೆ

ಸಿಂಹಗಳ ಮೂಳೆ, ಚರ್ಮ, ಉಗುರು ಇತ್ಯಾದಿಗಳನ್ನು ಬೇರ್ಪಡಿಸಿ ಅವುಗಳನ್ನು ಅಮೆರಿಕ, ಚೀನಾ ಮುಂತಾದ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಈ ಸಿಂಹಗಳನ್ನು ಎಲ್ಲೆಲ್ಲಿಂದಲೋ ಬರುವ ಕುಬೇರ ಬೇಟೆಗಾರರ ವಿನೋದಕ್ಕಾಗಿಯೂ ಬಳಸಲಾಗುತ್ತಿದೆ. ಬೇಟೆಯಾಡುವ ಪ್ರಾಣಿಗಳನ್ನೇ ಬೇಟೆಯನ್ನಾಗಿಸಿ ಪ್ರವಾಸಿಗರನ್ನು ಆಕರ್ಷಿಸುವ ಸಾಧನಗಳನ್ನಾಗಿ ಬಳಸಲಾಗುತ್ತಿದೆ. ಪ್ರಾಣಿದಯಾ ಸಂಘಗಳ ಹೆಸರಲ್ಲಿ, ಪ್ರಾಕೃತಿಕ ಧಾಮಗಳ ಸೋಗಲ್ಲಿ ಕಟುಕರೇ ನಡೆಸುತ್ತಿರುವ ನೂರಾರು ಕೇಂದ್ರಗಳು ಈ ಕೆಲಸಗಳನ್ನು ಮಾಡುತ್ತಿವೆ.

ವನ್ಯ ಮೃಗಗಳನ್ನು ಬೇಟೆಯಾಡಲೆಂದೇ ದಕ್ಷಿಣ ಆಫ್ರಿಕಾಕ್ಕೆ ಬರುವ ಶ್ರೀಮಂತ ಪ್ರವಾಸಿಗರ ಗುಂಪಿದೆ. ಆ ರೀತಿ ಬೇಟೆಯಾಡಲು ಪರವಾನಗಿ ಪಡೆಯಲು ಪ್ರತಿ ಬೇಟೆಗಾರ ಸಾವಿರಾರು ಅಮೆರಿಕನ್